ಮಂಗಳೂರೇನು? ಬೆಂಗಳೂರು ಎಂದರೂ ನಾನು ಹೋಗುವವಳೇ. ಮಂಗಳೂರಿಗೆ ಹೋಗಿ ಆ ಮೂಳೆತಜ್ಞರನ್ನು ಭೇಟಿಯಾದೆ. ಅವರು ನನ್ನ ಮಂಡಿ ಪರೀಕ್ಷಿಸಿ ಅಲ್ಲೇ ನಾಲ್ಕು ಹೆಜ್ಜೆ ಹಾಕುವಂತೆ ಸೂಚಿಸಿದರು. ನೋವು ತುಂಬಿದ ನನ್ನ ನಡಿಗೆಯನ್ನು ನೋಡಿ ಹೇಳಿದರು, 'ನೀವು ಪ್ರತಿ ಆರು ತಿಂಗಳಿಗೊಮ್ಮೆ ಎರಡೂ ಮಂಡಿಗೆ ಒಂದೊಂದು ಇಂಜಕ್ಷನ್ ಚುಚ್ಚಿಸಿಕೊಳ್ಳಬೇಕು. ದಿನಾ ರಾತ್ರಿ ಮಲಗುವ ಮೊದಲು ಒಂದು ಮಾತ್ರೆ ಸೇವಿಸಬೇಕು'. ಆಜೀವಪರ್ಯಂತ ಇಂಜಕ್ಷನ್, ಮಾತ್ರೆ ತೆಗೆದುಕೊಳ್ಳುವ ಆ ಔಷಧಿಗೆ ಅಲ್ಲೇ ದೊಡ್ಡ ನಮಸ್ಕಾರ ಹಾಕಿದೆ.

ಇಷ್ಟಾಗುವಾಗ ನನ್ನ ಮೈದುನನ ಮನೆಯಲ್ಲಿ ಪೂಜಾ ಕಾರ್ಯಕ್ರಮವಿತ್ತು. ನಾನು ಕುಂಟುತ್ತ ನಡೆಯುವುದನ್ನು ನೋಡಿದ ಮೈದುನನ ಹೆಂಡತಿ, 'ಅಕ್ಕಾ, ಕಾಲುನೋವಾ?' ಎಂದು ಕೇಳಿದಳು. 'ಹೌದು, ಎಲ್ಲಾ ಮದ್ದು ಮಾಡಿದ್ದಾಯ್ತು. ಪರಿಣಾಮ ಮಾತ್ರ ಸೊನ್ನೆ. ಏನು ಮಾಡುವುದೆಂದು ಗೊತ್ತಾಗುತ್ತಿಲ್ಲ' ವೇದನೆಯಿಂದ ನುಡಿದೆ. 'ನೀನು ಪುತ್ತೂರಿನ ಬೊಳುವಾರಿನಲ್ಲಿರುವ ಆಯುರ್ವೇದ ಔಷಧಿ ಮಾರುವ, 'ಉತ್ತಮ ಮೆಡಿಕಲ್'ಗೆ ಹೋಗು. ಅಲ್ಲಿಗೆ ಶನಿವಾರ ಮತ್ತು ಸೋಮವಾರ ಕೇರಳದಿಂದ ಪಂಡಿತರೊಬ್ಬರು ಬರುತ್ತಾರೆ. ಅವರು ಕೊಡುವ ಕಷಾಯ, ಲೇಪ, ಮಾತ್ರೆಗಳಿಂದ ಮಂಡಿನೋವು ಸಂಪೂರ್ಣ ಹೊರಟುಹೋಗುತ್ತದೆ. ಆದರೆ, ಒಂದು ಕಂಡೀಶನ್. ಮೂರು ತಿಂಗಳು ತಪಸ್ಸಿನಂತೆ ಬಿಡದೆ ಮಾಡಬೇಕು. ಅವರಿಂದ ಗುಣಮುಖರಾದವರು ಹಲವರಿದ್ದಾರೆ' ಹೇಳಿದಳು. ಮೂರು ತಿಂಗಳು ಮದ್ದು ಮಾಡುವುದು ದೊಡ್ಡ ವಿಷಯವೆಂದು ನನಗೆ ತೋರಲಿಲ್ಲ.

'ಉತ್ತಮ ಮೆಡಿಕಲ್'ಗೆ ಹೋದಾಗ ಅಲ್ಲಿನ ಔಷಧಿ ಮಾರಾಟಗಾರರು ಹೇಳಿದರು, 'ಕೇರಳದಿಂದ ಕರ್ನಾಟಕಕ್ಕೆ ಕೊರೊನಾ ಕಾರಣದಿಂದ ಈಗ ವಾಹನ ಸಂಚಾರವನ್ನು ಬಂದ್ ಮಾಡಿದ್ದಾರೆ. ಹಾಗಾಗಿ, ಪಂಡಿತರಿಗೆ ಪುತ್ತೂರಿಗೆ ಬರಲು ಆಗುವುದಿಲ್ಲ'. ಇದನ್ನು ಕೇಳಿ ಸಪ್ಪಗಾದ ನನ್ನ ಮುಖ ನೋಡಿ ಅವರು ಮುಂದುವರಿಸಿದರು, 'ನೀವು ಒಂದು ಕೆಲಸ ಮಾಡಬಹುದು. ನಾವು ಪಂಡಿತರ ನಂಬರ್ ಕೊಡುತ್ತೇವೆ. ನೀವು ನಿಮಗೆ ಎಲ್ಲೆಲ್ಲಿ, ಏನೇನು ನೋವು ಆಗುತ್ತದೆ ಅವರಿಗೆ ಫೋನಲ್ಲಿ ಹೇಳಿ. ಅದರ ಆಧಾರದ ಮೇಲೆ ಅವರು ಔಷಧಿಯನ್ನು ಹೇಳುತ್ತಾರೆ. ಅದನ್ನು ನಾವು ಇಲ್ಲಿ ಕೊಡುತ್ತೇವೆ'. ನಾನು ಆಯಿತು ಎಂಬಂತೆ ತಲೆಯಾಡಿಸಿದೆ. ಪಂಡಿತರಿಗೆ ಅಲ್ಲಿಂದಲೇ ಫೋನ್ ಮಾಡಿ ನನ್ನ ಮಂಡಿನೋವನ್ನು ವಿವರಿಸಿದೆ. ಮಂಡಿ ಬಾತುಕೊಂಡಿರುವುದನ್ನೂ ಹೇಳಿದೆ. ಸಾವಧಾನದಿಂದ ಕೇಳಿಸಿಕೊಂಡ ಅವರು ಅದಕ್ಕೆ ಬೇಕಾಗುವ ಔಷಧಿಯನ್ನು ಕೊಡಲು ಆ ಮೆಡಿಕಲ್‌ನವರಿಗೆ ಹೇಳಿದರು.

ಈಗ ಲೇಪ, ಕಷಾಯ, ಮಾತ್ರೆ ಎಂದು ಇಡೀ ದಿನ ನಾನು ಮೊಣಗಂಟಿನ ಆರೈಕೆಯಲ್ಲೇ ಕಳೆಯುವಂತಾಯಿತು. ಚಮತ್ಕಾರವೆಂಬಂತೆ ಈ ಮದ್ದು ಕೆಲಸ ಮಾಡತೊಡಗಿತು. ನಡೆಯಬೇಕಾದರೆ ಕೋಲು ಹಿಡಿಯುತ್ತಿದ್ದ ನಾನು ವಾರ ಕಳೆಯುವಷ್ಟರಲ್ಲಿ ಆಧಾರವಿಲ್ಲದೆ ನಡೆಯುವಂತಾದೆ. ನನ್ನ ಈ ಚೇತರಿಕೆಯನ್ನು ನೋಡಿ ನನ್ನ ತೋಟದ ಕೆಲಸದವ ಹೇಳಿದ–'ನಾನು ಒಂದು ಹರಕೆ ಹೇಳಿದ್ದೆ. ಅದರಿಂದಲೇ ನಿಮಗೆ ಗುಣವಾದದ್ದು'. 'ಏನು ಹರಕೆ ಅದು?' ನಗುತ್ತಾ ಕೇಳಿದೆ. 'ನೀವು ಕೋಲು ಇಲ್ಲದೆ ನಡೆಯುವಂತಾದರೆ ಕೊರಗಜ್ಜನ ಕೋಲಿಗೆ ಬೆಳ್ಳಿಯ ಕಟ್ಟು ಹಾಕಿಸುತ್ತೇನೆಂದು ಹೇಳಿದ್ದೆ. ಅದಕ್ಕೆ ಸುಮಾರು ಸಾವಿರ ರೂಪಾಯಿಯಷ್ಟು ಖರ್ಚು ಬೀಳುತ್ತದೆ. ಈಗ ಅದನ್ನು ನಡೆಸಿಕೊಡಬೇಕು. ಇಲ್ಲದಿದ್ದರೆ ತುಳುನಾಡಿನ ದೈವ ಕೊರಗಜ್ಜನ ಕೋಪಕ್ಕೆ ಗುರಿಯಾಗಬೇಕಾದೀತು' ಗಂಭೀರವಾಗಿ ಉತ್ತರಿಸಿದ. 'ಆಯ್ತು. ನೀನು ಹೇಳಿಕೊಂಡ ಹರಕೆಯನ್ನು ನೆರವೇರಿಸೋಣ. ಇಷ್ಟೆಲ್ಲಾ ಖರ್ಚು ಮಾಡಿದವಳಿಗೆ ಅದೊಂದು ದೊಡ್ಡದೇ?' ಎಂದು ಮತ್ತೆ ನಕ್ಕೆ.

ಅಂತೂ ಪಂಡಿತರ ಔಷಧಿ ಪರಿಣಾಮವೋ, ಕೊರಗಜ್ಜನ ದಯೆಯೋ ನನ್ನ ಮಂಡಿನೋವು ಈಗ ಸಂಪೂರ್ಣ ವಾಸಿ ಆಗಿದೆ. ಮೊದಲಿನಂತೆ ಸರಾಗವಾಗಿ ಬೆಟ್ಟ ಹತ್ತುತ್ತೇನೆ, ಇಳಿಯುತ್ತೇನೆ. ಬಾಡಿಗೆ ಜೀಪು ಸಿಗದಿದ್ದರೆ ಮನೆಯಿಂದ 8 ಕಿ.ಮೀ. ದೂರವಿರುವ ಕಲ್ಲುಗುಂಡಿ ಪೇಟೆಗೆ ನಡೆದೇ ಹೋಗುತ್ತೇನೆ.

●